da-573
T.P-4

Regd No B G 182 ಗೋಮಾತಾಕೀ ಜೈ ರಾಜ್ಯೋತ್ಸವ ವಿಶೇಷ ಸಂಚಿಕೆ Monthly November 1972 ನವೆಂಬರ್

ಗೋರಕ್ಷಣಕ್ಕೆ ಲೇಖನ ಕೊಡು
ತ್ತಿರುವವರಿಗೆ, ನೆರವು (ಡೊನೇರ್ಷ)
ನೀಡುತ್ತಿರುವವರಿಗೆ, ಪ್ರಚಾರಮಾಡು
ತ್ತಿರುವವರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ
ಹಂಚಲಾಗುತ್ತಿದೆ

ವಾರ್ಷಿಕಚಂದಾ ಅಂಚೆಮೂಲ್ಯ 80ಪೈಸೆ
ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಗೋರಕ್ಷಣ
GORAKSHANA

Plea.e help in every way
This Humanitarian
– Propaganda Paper –
Many Papers Distributed Free
ಗೋರಕ್ಷಣ, ಅಹಿಂಸಾ
ಪ್ರಚಾರ ಪತ್ರಿಕೆ
ದೇಶದಾದ್ಯಂತ ಗೋವಧೆ ಕೊಡಲೆ ನಿಲ್ಲಲಿ

Office– 1067 Chamarajapuram Mysore 4
ಸಂಪಾದಕರು : ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್
ವರ್ಷ 23 rd Year
ಬಿಡಿ ಪ್ರತಿ 5 ಪೈಸೆ

Cow Slaughter should be banned Immediately

Kannada version of the A ticle– " Were cow-sl ughter, meat-sacrifice and meat-eating prevalent in Vedic times ? " –
From " A Review of Beef in Ancient India "
Compiled by Syt J Dalmiaji

ಗೋಹತ್ಯ, ಪ್ರಾಣಿಬಲಿ ಮತ್ತು ಮಾಂಸಾಹಾರ ವೇದಕಾಲದಲ್ಲಿ ರೂಢಿಯಲ್ಲಿತ್ತೆ ?

(ಮುಂದುನರಿದುದು)

— ಗೋಬಿಃ ಶ್ರೀಣೀತ ಮತ್ಸರಂ

ಈ ಮಂತ್ರದ ಪದಶಃ ಭಾಷಾಂತರವು ' ಬೆರಸು (ಶ್ರೀಣಿತ) ಸೋಮ (ಮತ್ಸರಂ) ಗೋವಿನೊಡನೆ (ಗೋಬಿಃ) ಎಂದಾಗುವುದು. ಪದಗಳು ಅಕ್ಷರಶಃ, ಎಲ್ಲಾ ಸೋಮವನ್ನೂ ಪೂರ್ಣ ಗೋವಿನೊಡನೆ ಬೆರಸು ಅಂದಾಗುವುದು. ಆದರೆ ಇಲ್ಲಿ ಅದರ ಅರ್ಥ " ಸೋಮರಸವನ್ನು ಹಸುವಿನ ಹಾಲಿನೊಡನೆ ಬೆರಸು " ಎಂದಾಗುವುದು. ಇಲ್ಲಿ ಪೂರ್ಣವನ್ನು ಭಾಗಕ್ಕಾಗಿ ಉಪಯೋಗಿಸಲಾಗಿದೆ ಹಾಲು ಹಸುವಿನ ಒಂದು ಭಾಗ, ಸೋಮದ ಒಂದು ಭಾಗ ಅದರ ರಸ. ಇಲ್ಲಿ ಈ ಎರಡು ಭಾಗಗಳ ಬೆರಸುವುದು ಮಾತ್ರ ಉದ್ದೇಶಿಸಲಾಗಿದೆ. ವೇದದ ಭಾಷೆಯ ಸಂಪ್ರದಾಯ ಹಾಗಿತ್ತು. ಅದೊಂದು ಭಾಷೆಯ ರೀತಿ. ಈ ರೀತಿಯು ತಿಳುವಳಿಕೆಯಾದರೆ ಯಾವ ಸಂಶಯವೂ ಉಳಿಯುವುದಿಲ್ಲ.

ಈ ಮಂತ್ರದಲ್ಲಿ ನಾವು ಗೋ ಶಬ್ದವನ್ನು ' ಹಸುವಿನ ಹಾಲು " ಎಂದು ಅರ್ಥಮಾಡದಿದ್ದರೆ, ಮತ್ತು ಸೋಮವನ್ನು ಹಸುವಿನೊಡನೆ ಬೆರಸು ಎಂದು ಅರ್ಥವಿವರಣೆ ಮಾಡದರೆ, ಆಗ ಅರ್ಥದಲ್ಲಿ ಹೊಂದಿಕೆ ಇರುವುದಿಲ್ಲ ; ಯಾಕೆಂದರೆ ಯಾವುದೇ ರೀತಿಯಲ್ಲೂ ಹಸುವಿನೊಡನೆ ಸೋಮವನ್ನು ಬೆರೆಸಲಾಗುವುದಿಲ್ಲ. ಹಸುವು ಒಂದು ಉದ್ದವಾದ ಪ್ರಾಣಿವರ್ಗದ್ದು, ಮತ್ತು ಸೋಮ ಒಂದು ಬಳ್ಳಿಯ ರಸ. ಅವುಗಳನ್ನು ಹೇಗೆ ಬೆರೆಸಲು ಸಾಧ್ಯ. ಸೋಮವನ್ನು ಒಂದು ಜೀವಿತ ಹಸುವಿನೊಡನೆ ಅಥವಾ ಸತ್ತ ಪೂರ್ತಾ ಸತ್ತ ಪೂರ್ತಾ ಹಸುವಿನೊಡನೆ ಬೆರೆಸಲಾಗುವುದಿಲ್ಲ ಗೋಹತ್ಯೆ ಮತ್ತು ಗೋಮಾಂಸ ಸಮರ್ಥಿಸುವವರು, ಹಸುವನ್ನು ವಧೆಮಾಡಿ ಅದರ ಮಾಂಸ ಡೊಡನೆ ಸೋಮವನ್ನು ಬೆರೆಸಬಹುದೆಂದು ಕಥಮಾಡಿದರೆ, ಆಗ ನಾವು ಗೋವಿನ ಸರಿಯಾದ ಅರ್ಥವಾದ ಹಸು ಎಂಬುದನ್ನು ರದ್ದುಮಾಡಬೇಕಾಗುವುದು : ಆದರೆ ಅಲಂಕಾರಿಕೆ ವಿಸ್ತರಣೆಯಲ್ಲಿ ಅದನ್ನು ಗೋಮಾಂಸದ ಕಡಮೆದರ್ಜೆಯ ಅರ್ಥವಾಗಿ ತಿಳಿದುಕೊಳ್ಳಬೇಕಾಗುವುದು. ಆಂತಹ ಸಂದರ್ಭದಲ್ಲಿ ನಾವು ಗೋ ಶಬ್ದದ ನಿಜವಾದ ಹಸು ಎಂಬ ಅರ್ಥವನ್ನು ಬಿಡಬೇಕಾಗುವುದು' ಮತ್ತು ಗೋಮಾಂಸದ ಪ್ರಧಾನವಲ್ಲದ ಅರ್ಥವನ್ನು ಬಲಾತ್ಕಾರವಾಗಿ ಅವಲಂಬಿಸಬೇಕಾಗುವುದು. ಆಗ ನಾವು ಗೋವನ್ನು ಹಸುವಿನ ಹಾಲು ಎಂದು ಯಾಕೆ ತೆಗೆದುಕೊಳ್ಳಬಾರದು ; ಅದು ಸೋಮರಸದೊಡನೆ ಬೆರೆಸಲು ಸುಲಭವಾಗಿರುವುದು ಅದನ್ನು ಗೋಮಾಂಸವೆಂದು ಅರ್ಥಮಾಡುವವರು " ಸತ್ತ ಹಸುವಿನ ಮಾಂಸ " ಎಂದು ಬಿಂಬಿಸಿ ಅರ್ಥಮಾಡಬೇಕಾಗಿದೆ ಅದನ್ನು ಜೀವಿತ ಹಸುವಿನ ಹಾಲು ಎಂದು ಅರ್ಥಮಾಡುವುದು ಸುಲಭವೂ ಸರಿಹೋಗುವುದು

[ಮುಂದುನರಿಯುವುದು.

ಸರ್ವರಿಗೂ ರಾಜ್ಯೋತ್ಸವ ಶುಭಾಶಯಗಳು Rajyotsava Greetings to all

Cow slaughter

N. R. S

The problem of banning cow–slaughter is bedevilled by superstitions Commiss on after comm ssion has proved t h a t e ery so–called worthless Cow is an asset, not a burden. Apart from use in agricultere it lways produces more fuel and fertilizers, as compost from cowdung and urine, and even in death it supplies leather, bones and horns which more t h a n make up for what it costs to keep Yet the superstition that billions of cattle are redundant and a drain in the country's resources persists Another superstition that the country's cattle population can be only improved if cattle are slauahtered for food A highly respected medical man told me 30 years ago ' Do not expect the cattle population to improve till we st rt eating beef ' and pointed out to me the cattle of America as examples But he little knew that the cattle of beef-eating country's from Suez to Karachi, and Malasia and Indonasia to China and Japan— all beef–eating countries— are far worse th n ndian cattle.

[To be continued

ದಯವೇ ಧರ್ಮದ ಮೂಲ

" ಅಹಿಂಸಾ ಪರಮೋ ಧರ್ಮಃ " ಎಂದು ವೇದ ಸಾರಿರುವುದು ಎಲ್ಲರಿಗೂ ಗೊತ್ತಾದ ವಿಷಯ ; ಸಕಲ ಪ್ರಾಣಿಗಳೆಲ್ಲರಿಗೂ ನಾವು ಕರುಣೆ ತೋರಿಸಬೇಕು ; ದಯವೇ ಧರ್ಮದ ಮೂಲವಾಗಿದೆ ; ತನಗೆ ಬರುವ ದುಃಖವನ್ನು ತಿಳಿದಿರುವವನು ಇತರ ಪ್ರಾಣಿಗಳಿಗೆ ತೊಂದರೆ ಕೊಡಕೂಡದು ; ಅವನು ತನ್ನನ್ನು ತಾನು ಹೇಗೆ ಪ್ರೀತಿಸುತ್ತಾನೋ ಅದೇ ತರಹ ಇತರ ಪ್ರಾಣಿಗಳನ್ನೂ ಪ್ರೀತಿಸಬೇಕು.

" ಸಕಲ ಪ್ರಾಣಿಗಳನ್ನೂ ತನ್ನಂತೆ ಭಾವಿಸಬೇಕೇ "
(ಬಸವೇಶ್ವರ ವಚನ ಸಂಗ್ರಹ – ಪುಟ 193)

ನಿಮ್ಮ ನೆರೆಯವರನ್ನು ನಿಮ್ಮಂತೆ ಪ್ರೀತಿಸಿರಿ ಎಂದು ಯೇಸುಕ್ರಿಸ್ತರೂ ಹೇಳಿದ್ದರೆ ತಿರುವಳ್ಳುವರು ' ನಿಮಗೆ ಬುದ್ಧಿ ಇದ್ದರೆ ಇತರ ಪ್ರಾಣಿಗಳನ್ನು ನಿಮ್ಮಂತೆ ಪ್ರೀತಿಸಬೇಕು ; ನೀವು ಪ್ರೀತಿಸುವುದಿಲ್ಲವೆಂದರೆ ನಿಮಗೆ ಬುದ್ಧಿಯಿಲ್ಲವೆಂದು ಅರ್ಥವಾಗುತ್ತದೆ ' ಎಂದಿದ್ದಾರೆ.

" ಅರಿವಿನಾಲ್ ಆಗುವುದುಂಡೋ ಪಿರಿದಿನ್ ನೋಯ್
ತನ್ನೋಯ್ ಪೋಲ್ ಪೋರ್ವಾಕ ಕಡೆ "
(ಕುರಳ್ – ಪುಟ 315

ಇದರ ಅರ್ಥ ಇತರ ಪ್ರಾಣಿಗಳಿಗೆ ಬರುವ ದುಃಖವನ್ನು ನಿಮಗೆ ಬಂದಿದ್ದಾಗಿ ಭಾವಿಸುವುದಿಲ್ಲವಾದರೆ ಬುದ್ಧಿಯಿಂದ ಪ್ರಯೋಜನ ಏನು ? (ಕ. ನು)

ಪ್ರಗತಿಪರ ಯೋಜನೆಗಳ ಕಾರ್ಯಕ್ಕೆ ರೂಪಕ್ಕೆ ಸರ್ಕಾರದ ಯತ್ನ

ರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ್ ಅರಸ್
ಅವರು ನೀಡಿದ ಸಂದೇಶ

ಕನ್ನಡ ರಾಜ್ಯೋತ್ಸವದ ಈ ಸುದಿನದಂದು ನಾಡ ಬಾಂಧವರಿಗೆಲ್ಲಾ ನನ್ನ ಹಾರ್ದಿಕ ಶುಭಾಶಯಗಳು. ಇದೀಗ 17 ನೇ ವರ್ಷದ ಹೊಸ್ತಿಲಲ್ಲಿರುವ, ಮೈಸೂರು ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ, ಪ್ರಚಲಿತ ಅವಧಿ ಒಂದು ಪರ್ವಕಾಲ. ದಾರಿದ್ರ್ಯವನ್ನು ಹೊಡೆದೋಡಿಸುವ ಮತ್ತು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕನಿಷ್ಠ ಬೇಡಿಕೆಗಳನ್ನಾದರೂ ಈಡೇರಿಸುವ ಬಗೆಗೆ ವಿಚಾರಕ್ರಾಂತಿ ಈ ವರ್ಷದ ಆದಿಯಲ್ಲಿ ಆರಂಭವಾದ, ಅದರ ಸಾಫಲ್ಯದ ಹಿರಿಯಾಸೆ ಜನತೆಯಲ್ಲಿ ಮೂಡಿದೆ. ಅದಕ್ಕೆ ಅನುಗುಣವಾಗಿ ಸರ್ಕಾರ ಅನೇಕ ಪ್ರಗತಿಪರ ಯೋಜನೆಗಳನ್ನು ಕಾರ್ಯಗತಮಾಡಲು ಯತ್ನಿಸುತ್ತಿದೆ.

ಭೂಸುಧಾರಣೆ ತಿದ್ದುಪಡಿ ಶಾಸನವನ್ನು ಆಚರಣೆಗೆ ತಂದು ಭೂರಹಿತರು ಹಾಗೂ ಕೃಷಿ ಕಾರ್ಮಿಕರಿಗೆ ಸುಮಾರು ನಾಲ್ಕು ಲಕ್ಷ ಎಕರೆ ಜಮೀನು ಹಂಚಲು ಕ್ರಮ ಕೈಗೊಂಡಿದ್ದೇನೆ.

ವಾಸಕ್ಕೆ ಮನೆ ಇಲ್ಲದವರಿಗೆ, ನಿವೇಶನಗಳನ್ನು ಒದಗಿಸುವ ವ್ಯಾಪಕ ಯೋಜನೆ ಕಾರ್ಯಗತವಾಗುತ್ತಿದೆ. ಮೊದಲ ಹಂತದಲ್ಲಿ ಐದು ಲಕ್ಷ ನಿವೇಶನಗಳನ್ನೊದಗಿಸುವ ಯೋಜನೆಯ ಅಂಗವಾಗಿ ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ನಿವೇಶನಗಳನ್ನು ಹಂಚಲಾಗಿದೆ. ವಸತಿ ಸಮಸ್ಯೆ ನಿವಾರಣೆಗಾಗಿ ಇಷ್ಟು ಅಗಾಧ ಪ್ರಮಾಣದಲ್ಲಿ ಯೋಜಿಸಿರುವುದು ಯತ್ನಿಸಿರುವುದು ಇದೇ ಮೊದಲು ಬಾರಿ ಎನ್ನುವುದರಲ್ಲಿ ಸಂದೇಹವಿಲ್ಲ.

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಕಾಳನದಿ ಯೋಜನೆಯನ್ನು ಕೇಂದ್ರದ ನೆರವಿನಿಂದ ಕೈಗೊಂಡಿದ್ದೇವೆ. ಅಲ್ಲದೆ ದೇಶದಲ್ಲಿ ಕಂಡುಬಂದಿರುವ ವಿದ್ಯುತ್ ಕೊರತೆಯನ್ನು ಆದಷ್ಟು ಮಟ್ಟಿಗೆ ನಿವಾರಿಸಲು, ರಾಜ್ಯದಲ್ಲಿ ಉಳಿದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜನೆಯೊಂದನ್ನು ಕೇಂದ್ರದ ಪರಿಶೀಲನೆಗೆ ಕಳುಹಿಸಿದ್ದೇವೆ.

ಕೈಗಾರಿಕಾ ಕ್ಷೇತ್ರದ ಪ್ರಗತಿ ತ್ವರಿತಗೊಳ್ಳುತ್ತಿದೆ. ವಿಜಯನಗರ ಉಕ್ಕಿನ ಕಾರ್ಖಾನೆ ಈ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು; ಅಂತೆಯೇ ಕುದುರೆಮುಖ ಕಬ್ಬಿಣದ ಅದಿರು ಯೋಜನೆ ಮಂಗಳೂರು ಸರ್ಪಳಿ ಎಂದರೆ, ಮಂಗಳೂರು–ಹಾಸನ ರೈಲು ಮಾರ್ಗ, ಮಂಗಳೂರು ರಸಾಯನಿಕ ಗೊಬ್ಬರ ಕಾರ್ಖಾನೆ ನಿರ್ಮಾಣ ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ಆಯಾ ಭಾಗಗಳಲ್ಲಿ ಆರ್ಥಿಕ ಕ್ರಾಂತಿ ಉಂಟುಮಾಡಲಿರುವ ಬೃಹತ್ ಯೋಜನೆಗಳವು

ಪ್ರಗತಿ ಸಾಧನೆಯನ್ನು ತ್ವರಿತಗೊಳಿಸಲು ನಾವು ಉದ್ಯುಕ್ತರಾಗುವ ಸಮಯದಲ್ಲಿ ರಾಜ್ಯದ ನೂರನೆ ಒಂದು ಭಾಗ ಮಳೆ ಇಲ್ಲದೆ ತೀವ್ರ ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದದ್ದು ದುರದೃಷ್ಟಕರ. ಹಿಂದೆಂದೂ ಇಲ್ಲದಷ್ಟು ಬೃಹತ್ ಪ್ರಮಾಣದಲ್ಲಿ, ಪರಿಹಾರ ಕ್ರಮ ಕೈಗೊಂಡಿದ್ದೇವೆ. ಪರಿಸ್ಥಿತಿ ಸುಧಾರಿಸುವವರೆಗೂ ಪರಿಹಾರ ಕಾಮಗಾರಿಗಳನ್ನೂ ಇತರ ಪೌಕರ್ಯಗಳನ್ನೂ ಮುಂದುವರಿಸಲು ಸರ್ಕಾರ ಸಿದ್ಧವಾಗಿದೆ. ಸನ್ನದ್ಧವಾಗಿದೆ ಎಂದು ಸ್ಪಷ್ಟಪಡಿಸುತ್ತೇನೆ

ಆಗತ್ಯ ಪಸ್ತುಗಳ ಬೆಲೆ ಏರುತ್ತಿರುವ ಈ ಸಂದರ್ಭದಲ್ಲಿ ಜನರಿಗೆ ನ್ಯಾಯವಾದ ಬೆಲೆಯಲ್ಲಿ ಆಹಾರಧಾನ್ಯ ದೊರಕಿಸುವ ಉದ್ದೇಶದಿಂದ ಭತ್ತದ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಳ್ಳಲಿದೆ. ಇದರಿಂದ ದುರ್ಬಲ ವರ್ಗಕ್ಕೆ ಸೇರಿದ ಸುಮಾರು ಒಂದು ಕೋಟಿ ಜನರಿಗೆ ಆಹಾರಧಾನ್ಯ ಒದಗಿಸುವ ವ್ಯವಸ್ಥೆ ನಡಾಯುತ್ತಿದ್ದೇವೆ ಬೆಲೆಗಳನ್ನು ಹತೋಟಿಯಲ್ಲಿಟ್ಟು ಸಮಾಜದ ದುರ್ಬಲ ವರ್ಗದವರಿಗೆ ಅನುಕೂಲ ಉಂಟುಮಾಡಲು ನಾವು ಕೈಗೊಂಡಿರುವ ಕ್ರಮಗಳಿಗೆ ಜನತೆ ಹೃತ್ಪೂರ್ವಕ ಬೆಂಬಲ ನೀಡುವುದೆಂಬ ಭರವಸೆ ನನಗಿದೆ.

ರಾಜ್ಯದ ಹೆಸರು ಕರ್ನಾಟಕವಾಗುವ ಶುಭ ಸಂದರ್ಭ ಸನ್ನಿಹಿತವಾಗಿದೆ. ಇದಕ್ಕೆ ದೊರಕಿರುವ ಉತ್ಸಾಹಪೂರ್ಣ ಸ್ವಾಗತ ಜನತೆಯ ಭಾವೈಕ್ಯ ಸಾಧನೆಯ ಸಾಕ್ಷಿ. ಅಧಿಕಾರಕ್ಕೆ ಬಂದ ಈ ಸ್ವಲ್ಪ ದಿನಗಳಲ್ಲಿ ನಮ್ಮ ಸರ್ಕಾರದ ಕಾರ್ಯಕ್ರಮಗಳಿಗೆ ಜನತೆ ನೀಡಿರುವ ಸಂಪೂರ್ಣ ಬೆಂಬಲದಿಂದಾಗಿ ಅವರ ಆಶೋತ್ತರಗಳ ಸಾಧನೆಗಾಗಿ ಇನ್ನೂ ಹೆಚ್ಚು ಶ್ರಮಿಸುವ ಸಾಮರ್ಥ್ಯ ನನಗೆ ಬಂದಿದೆ ಜನತೆಯ ಆದೇಶದಂತೆ ಕೈಗೊಂಡಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ, ಮೈಸೂರು ರಾಜ್ಯ ಸಂತುಷ್ಟ ಜನತೆಯ, ಸಂಪದ್ಭರಿತ ನಾಡಾಗಲಿ ಎಂದು ಹಾರೈಸುತ್ತೇನೆ.

ಗೋ ಗೀ.....ಬ್ರಾಹ್ಮಣ

ಲೇಖಕ– ಹೊಂಗನೂರು ಅನಂತಕೃಷ್ಣ ಜೋಯಿಸ್

ಕೆಲವು ಜನರಿಗೆ ಜೋಯಿಸರ ಮಾತಿನಲ್ಲಿ ನಂಬಿಕೆ, ಇನ್ನು ಕೆಲವರಿಗೇನೋ ಹುಚ್ಚೆಂದು ಕಲ್ಪನೆ, ಮತ್ತೆ ಕೆಲವರಿಗಾದರೋ ಇವರೊಂದು ಪ್ರಾಚೀನ ಕಾಲದ ಗೊಡ್ಡು ಪ್ರಾಣಿ, ಅನಾಗರೀಕ ಮಾನವ ; ಇನ್ನುಳಿದ ಅಲ್ಪ ಸಂಖ್ಯೆಯವರಿಗೆ, ಇವರೆಲ್ಲೊ ನಮ್ಮ ಸಂಸ್ಕೃತಿಯನ್ನುಳಿಸಲು ಅವತರಿಸಿದ ಮಹಾಪುರುಷನೆಂದೇ ಭಾವನೆ ; ಈ ರೀತಿ ಹಲವಾರು ಜನರಿಗೆ ಅನೇಕ ರೀತಿಯಲ್ಲಿ ಕಾಣುತ್ತಿದ್ದ ಅವರು ನಿಜವಾಗಿಯೂ ನಾಗರೀಕರು, ಸುಸಂಸ್ಕೃತರು ; ಇದನ್ನರಿಯಡೆ ಅವರ ಬಗ್ಗೆ ತಪ್ಪು ಕಲ್ಪನೆ ಕಲ್ಪಿಸುವವರು ನಿಜವಾಗಿ ಕಣ್ಣಿದ್ದೂ ಕುರುಡರು.

ಮುಸ್ಲಿಮರಾಡಳಿತದ ಕಾಲದಿಂದ ಪ್ರಾರಂಭವಾದ ಈ ಗೋಹತ್ಯೆ ಇಂದಿನವರೆವಿಗೂ ಅವಿರತವಾಗಿ ನಡೆದುಕೊಂಡು ಬಂದಿರುವದನ್ನು ನೋಡಿ, ಓದಿ, ಕೇಳಿ, ಜೋಯಿಸರು ಸ್ವಸನಪಟ್ಟರು, ರೋಷಗೊಂಡರು, ಚಿಂತಾಕ್ರಾಂತರಾದರು. ಪರಕೀಯರಾದ ಮುಸ್ಲಿಂರು, ಬ್ರಿಟಿಷರು ಮಾಡಿದ ಅಪರಾಧಕ್ಕೆ ವ್ಯಸನಪಟ್ಟರು. ಆದರೆ ಸ್ವರಾಜ್ಯ ಬಂದನೆಲಾದರೂ ಗೋಹತ್ಯೆ ನಿಲ್ಲುವುದೆಂದು ಭಾವಿಸಿದ ಅದರಿಗೆ ನಮ್ಮ ಸರ್ಕಾರದ ನೀತಿಯಿಂದ ರೋಷವುಕ್ಕಿತು. ಇದರ ಪರಿಹಾರಕ್ಕಾಗಿ ಚಿಂತಾಕ್ರಾಂತರಾದರು. " ಇಡೀ ಭಾರತದಲ್ಲಿ ಇದರ ತಡೆ ನನ್ನಿಂದ ಸಾಧ್ಯವೆ ? ಆಗುವ ಕೆಲಸವೆ ? ರಾಜಕಾರಣಿಗಳೇ ಇದಕ್ಕೆ ಪ್ರೋತ್ಸಾಹ ನೀಡುತ್ತಿರುವಾಗ ಅದು ನಿಲ್ಲುತ್ತದೆಯೆ ? ಸರಕಾರವೇ ಗೋಹತ್ಯೆಯನ್ನೊಂದು ಉದ್ಯಮವನ್ನಾಗಿ ಕೈಗೊಂಡಿರುವಾಗ ಅದನ್ನು ನಿಲ್ಲಿಸುವ ಬಗೆಯಾದರೂ ಹೇಗೆ ? ಪ್ರಶ್ನೆಗಳೇನೋ ಅಸಂಖ್ಯಾತ, ಆದರೆ ಉತ್ತರ ? ಜೋಯಿಸರ ಮನವೆಂಬ ಸರೋವರ ಚಿಂತೆಯೆಂಬ ಬಿರುಗಾಳಿಗೆ ಸಿಕ್ಕಿ ಅಲೆಗಳೆಂಬ ಶೋಕದಿಂದ ತಕ್ಕರಿಸಿತು. ದಿನಬೆಳಗಾದರೆ ಅದೇ ಚಿಂತೆ : ರಾತ್ರಿ ನಿದ್ರೆ ಇಲ್ಲ.

ಪತಿಯ ಮೂಕ ವೇದನೆ ವೈದೇಹಿಗೆ ಅರಿವಾಗಲಿಲ್ಲ. ಆದರೆ ಯಾವುದೋ ಮಹತ್ತರ ಚಿಂತೆಗೆ ಸಿಲುಕಿ ಕೊರಗಿ ಕೃಶರಾಗುತ್ತಿರುವರೆಂದು ಗೊತ್ತು. " ಯಾವುದರಿಂದಿರಬಹುದೀ ಚಿಂತೆ ? ನನ್ನಿಂದಲೇ ? ಛೇ ! ಇರಲಾರದು. ಮಗನಿಂದಲೇ ? ಅವನಿಂದೇನು ; ಅತೀ ಸಿಹ್ಗೇಯನಾದ ಅವನು ಕೈ ತುಂಬಾ ಸಂಬಳ ತಂದು ತಂದೆಯ ಕೈಗೊಪ್ಪಿಸಿ ಅವರಾಜ್ಞೆಯಂತೆ ನಡೆದುಕೊಳ್ಳುತ್ತಿರುವನಲ್ಲ ! ಯಾರಾದರೂ ಏನನ್ನಾದರೂ ಅಂದಿರಬಹುದೆ ? ಇರಲಾರದು. ಯಾರ ತಂಟೆಗೂ ಹೋಗದೆ " ಧರ್ಮ ಸಂಸ್ಕೃತಿ " ಎಂದು ಗಂಟೆಗಟ್ಟಲೆ ಮಾತನಾಡುವ ಇವರನ್ನು " ವಿರಕ್ತ " ರೆಂದು ಜನರು ಹೇಳುವರಲ್ಲದೆ ಮತ್ತೇನು ಹೇಳಲು ಸಾಧ್ಯ ? ಈಗ ಅವರನ್ನೇ ಕೇಳುವುದು ಸರಿ " ಎಂದುಕೊಂಡು ಜೋಯಿಸರ ಧರ್ಮಪತ್ನಿ ಅವರು ಕುಳಿತಿದ್ದ ಬಳಿಗೆ ಬಂದರು. ಜೋಯಿಸರ ದೃಷ್ಟಿ ಬೇರೆಕಡೆಯಲ್ಲೋ ಇತ್ತು. ಬಾಹ್ಯದ ಅರಿವೇ ಇಲ್ಲದೆ ಯೋಚನಾಪರವಶರಾದ ಅವರನ್ನೆಚ್ಚರಿಸುವುದು ಹೇಗೆಂಬುದು ವೈದೇಹಿಗೆ ಹೊಳೆಯದೆ ಸೊನ್ನೆಗೋದು ಬಾರಿ ಕೆಮ್ಮಿದರು. ಆ ಕೆಮ್ಮು ತಮ್ಮನ್ನೆಚ್ಚರಿಸಲೆಂದೆಣಿಸಿ ಜೋಯಿಸರು ಪ್ರಶ್ನಾರ್ಥವಾಗಿ ತಮ್ಮ ಪತ್ನಿಯತ್ತ ನೋಡಿದರು ವೈದೇಹಿಯೇ ಮಾತಿಗಾರಂಭಿಸಬೇಕಾಯ್ತು

" ಏನೂಂದ್ರೆ, ಮನಸ್ಸಿಗೆ ಏನೋ ಹಚ್ಕೊಂಡು ತುಂಬಾ ಕೊರಗುತ್ತಿದ್ದೀರಲ್ಲ, ಯಾರೇನೆಂದರು ? ನಮ್ಮಿಂದ ಏನಾದರೂ ಬೇಜಾರಾಯಿತೆ ? '

" ಕರ್ಣೇಷು ಮಂತ್ರಿ " ಎನಿಸಿಕೊಂಡ ವಾತ್ಸಲ್ಯದಿಂದ ಕೇಳಿದ ಸಹಧರ್ಮಿಣಿಯಲ್ಲಿ ಚರ್ಚಿಸದೆ ಮತ್ತಾರಲ್ಲಿ ಚರ್ಚಿಸಲು ಸಾಧ್ಯ ; ಅದಕ್ಕಾಗಿಯೇ ಜೋಯಿಸರು ಮಾತಿಗಾರಂಭಿಸಿದರು.

" ಏನು ಹೇಳಲಿ ವೈದೇಹಿ, ನಿಮ್ಮಿಂದ ನನಗ್ಯಾವ ತೊಂದರೆಯೂ ಇಲ್ಲ, ಸುಖವಾಗಿಯೇ ಇದೀನಿ; ಆದರೆ ನಮ್ಮ ಧರ್ಮದ ಅಧಃಪತನ ನೋಡ್ತಾ ಇರೋದಕ್ಕೆ ಸಾಧ್ಯವಿಲ್ಲ. ನನ್ನ ದೇಶದಲ್ಲಿ ಒಂದು ದಿನಕ್ಕೆ ಲಕ್ಷಾಂತರ ಗೋವುಗಳನ್ನು ಕಡಿತಿದಾರಲ್ಲ ಯಾವ ಪುಣ್ಯಕಕ್ಕಾಗಿ ? ಇದು ಧರ್ಮದ ಅಳಿವನ್ನು ತೋರಿಸುತ್ತೊ ಉಳಿವನ್ನೇ ? ಅಸಂಖ್ಯಾತ ಪ್ರಾಣಿವಧೆ ನಡೆಯುವ ದೇಶದಲ್ಲಿ ಮಾನವತೆ ಇರೋದಿಲ್ಲ ಅಂತ ಮಾನವತಾವಾದಿಗಳೇ ಹೇಳಿಲ್ವೆ ? ಕ್ರೂರ ಮೃಗಗಳಿಗಿಂತ ಕಡೆಯಾಗಿ ವರ್ತಿಸುವುದು ನಾಗರೀಕತೆಯ ಲಕ್ಷಣವೇನು ? ಸುಸಂಸ್ಕೃತಿಯ ಕುರುಹೇನು ? ಹೋಗ್ಲಿ ಇದನ್ನೆಲ್ಲ ನೋಡ್ತಾ ಇರೋದಕೆ ಸಾಧ್ಯವೇ ? ಅದು ಖಂಡಿತಾ ಆಗೋದಿಲ್ಲ : ಅಂದಮೇಲೆ ಇದಕ್ಕೆ ಪರಿಹಾರ ? '

ಪತಿಯ ಪಣ್ಣ ಉದಾರ್ನ್ಯಾಸವನ್ನೇ ಕೇಳಿದ ಅವರ ಪತ್ನಿ ತನಗೆ ತೋಚಿದ್ದನ್ನು ಈ ರೀತಿ ಹೇಳಿದಳು— ' ಅಲ್ಲಾಂದ್ರೆ, ನಮ್ಮ ಕರ್ತವ್ಯ ನಾವು ಮಾಡೋಣ, ಅದು ನ್ಯಾಯ ; ನಾವು ಧರ್ಮಕ್ಕೆ ವಿರೋಧವಾಗಿ ಹೋಗೋದು ಬೇಡ, ನಾವು ಸರಿಯಾಗಿದ್ದರಾಯಿತು, ಬೇರೆಯವರ ವಾಡು ನಮಗ್ಯಾಕೆ ? ಅದರ ಬಗ್ಗೆ ಇಷ್ಟು ಚಿಂತೆಯೇಕೆ ?

[ಮುಂದುವರಿಯುವುದು

ಕನ್ನಡ ರಾಜ್ಯೋತ್ಸವ

1972

ನವೆಂಬರ್ ದಿನಾಂಕ ಒಂದು

ಅಂದು, ಇಂದು ಎಂದೆಂದಿಗೂ,
ನಮ್ಮೆಲ್ಲರಿಗೂ ಸುಖ ಸಂಭ್ರಮದ ದಿನ.
ಬಹು ಬೇಗನೆ ನಮ್ಮದು " ಕರ್ನಾಟಕ "
ರಾಜ್ಯವಾಗಿ, ಬಹು ದಿನದ ಕನಸು ನನಸಾಗಲಿದೆ.

ಈ ದಿನ, ದೇಶದ ಭದ್ರತೆಗಾಗಿ,
ಸುಖ ಸಮೃದ್ಧಿಗಾಗಿ,
ನಾಡಿನ ಏಳ್ಗೆಗಾಗಿ, ಮೇಲ್ಮೆಗಾಗಿ
ಬದ್ಧ ಕಂಕಣರಾಗೋಣ.

ವಾಶಿ ಹಕವಾದ, ಆತಿ ತೀವ್ರವಾದ
ಅನಾವೃಷ್ಟಿಯಿಂದ ರಾಜ್ಯಕ್ಕೆ
ಬಂದೊದಗಿದ ಕಷ್ಟವನ್ನು
ನಿವಾರಿಸಲು ಸರ್ವವಿಧ
ಪ್ರಯತ್ನದಲ್ಲಿ ನಿರತರಾಗೋಣ.

ಮೈಸೂರು ರಾಜ್ಯದ ವಾರ್ತಾ ಮತ್ತು ಪ್ರವಾಸೋದ್ಯಮ ಶಾಖೆಯಿಂದ ಪ್ರಕಟಿತ

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt.

(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of High Grade Iron Ore for Export

H .O: 4 Scindia House, New Delhi - 1.

ಜಯತು ಜಯತು ಗೋಕುಲ

ಭಾರತಾಂಬೆಯ ಮಡಿಲ ಮಲ್ಲಿಗೆ
ಜನಕೆ ತಂಪನು ತೂರಿದೆ ॥

ದಿವ್ಯಜ್ಯೋತಿಯ ಮಾಲೆಯೆಲ್ಲೆಡೆ
ಬೆಳಗಿ ಕತ್ತಲ ಹರಿದಿದೆ ॥

ಧೇನು ತಾಯಿಯ ಮನವು ಪುಳಕದಿ
ನಾಡ್ಗೆ ಶುಭ ಹಾರೈಸಿದೆ ॥

ತ್ಯಾಗದೇವತೆ ಗೋವಿದುದರದಿ
ಅಮೃತರುಚಿ ತೋರೈಸಿದೆ ॥

ಬಾಳದೀವಿಗೆ ಜ್ವಲಿತವಾಗಿದೆ
ಕನಸು ನನಸಿಗೆ ಇಳಿದಿದೆ ॥

ತೋಳತೆಕ್ಕೆಯನರಸಿ ವತ್ಸಗು
ತಾಯಬಳಿ ತಾ ಬಂದಿದೆ ॥

ಧರ್ಮದೇವತೆ ತೃಪ್ತಳಾಗುತ
ಜಗಕೆ ಸಂತಸ ನೀಡಿದೆ ॥

ಕೂರ್ಮ ಗತಿಯನು ಬಿಟ್ಟು ದ್ರುತದಿ
ಜಗತಿಸ್ರ ಗತಿಯನಪ್ಪಿದೆ ॥

ದಿವ್ಯಜ್ಯೋತ್ಸ್ನೆಯು ನಾಡದುಂಬಿದೆ
ಜಯತು ಜಯಜಯ ಗೋಕುಲ ॥

ಭವ್ಯ ಸಂಸ್ಕೃತಿ ಚಿಗುರ ತೊಡಗಿದೆ
ಸೌಖ್ಯವೊಂದಲಿ ಮನುಕುಲ ॥

— ವಜ್ರಳ್ಳಿ ಗಣಪತಿಶರ್ಮಾ

★

ಸವಿನುಡಿ

ಮಿತವ್ಯಯವಿಲ್ಲದೆ ಯಾರೂ ಐಶ್ವರ್ಯವಂತರಾಗುವುದಿಲ್ಲ, ಮತ್ತು ಆದನ್ನು ಹೊಂದಿದವರು ಬಡವರಾಗುವುದಿಲ್ಲ.

ಸ್ವಾತಂತ್ರ್ಯವನ್ನು ಯೋಚಿಸಿದಷ್ಟೂ ಕಾರಾಗೃಹಗಳ ಗೋಡೆಗಳು ಎತ್ತರವಾಗಿ ಬೆಳೆಯುತ್ತವೆ. — ಬಹದ್ದೂರ್ ಷಾ ಜಫರ್

ವುಡ್‌ಲಾಂಡ್ಸ್ ಅಮೋಘ 6 ನೇ ವಾರ ಭಾರತದಲ್ಲಿ ಗೋವಧೆ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಅಪೂರ್ವ 4 ನೇ ವಾರ

ಬಾಂಧವ್ಯ



ಪೂರ್ಣ ನಿಶ್ಶೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satvavad Press Chamarajapuram Mysore